ಅಧ್ಯಕ್ಷರು : ಮಾನ್ಯ ನಂಜೇಗೌಡರು ತಮ್ಮ ಭಾಷಣ ಪ್ರಾರಂಭ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ನನಗೆ ಹೇಳಿಕೆ ಮಾಡಿಸಬೇಕು ಮತ್ತೆ ನನ್ನನ್ನು ಧರಣಿ ಮಾಡಿಸಬೇಡಿ. ತಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ತಮ್ಮ ವಿಷಯವನ್ನು ಆಮೇಲೆ ತೆಗೆದುಕೊಳ್ಳುತ್ತೇನೆ. ಕೊನೆಗೆ ತೆಗೆದುಕೊಳ್ಳುತ್ತೇನೆ. ಮೇನ್ ಅಜೆಂಡಾ ಹಿಂದೆ ಹಾಕುತ್ತಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಯಾವ ಸಂದರ್ಭದಲ್ಲೂ ತಮಗೆ ತೊಂದರೆ ಕೊಡುವವನು ಅಲ್ಲ. ಎಲ್ಲೋ ಒಂದು ಸಾರಿ ವಿಚಾರವನ್ನು ಪ್ರಸ್ತಾಪ ಮಾಡಿ ಒಂದೊಂದು ಸಾರಿ ಬರುತ್ತೇನೆ.

ಅಧ್ಯಕ್ಷರು : ನನ್ನ ಸಮಸ್ಯೆ ಏನೆಂದರೆ ನಾವು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸೂಚಿಸತಕ್ಕ ನಿರ್ಣಯ ಏನಿದೆ ಅದು ಮುಖ್ಯವಾದ ವಿಷಯ. ಹಿಂದೆ ಎಲ್ಲಾ ಬಹಳ ಹೆಚ್ಚು ಸಮಯವನ್ನು ಇದಕ್ಕೆ ತೆಗೆದುಕೊಂಡಿದ್ದೇವೆ. ದುರದೃಷ್ಟವಶಾತ್ ನಮ್ಮ ಸನ್ನಿವೇಶದಲ್ಲಿ ಬಹಳ ಸ್ವಲ್ಪ ಸಮಯವನ್ನು ಈ ಚರ್ಚೆಗೆ ನಿಗದಿ ಮಾಡಿದ್ದೇವೆ. ನಮ್ಮ ಉದ್ದೇಶ ಇವತ್ತಾದರೂ ಚರ್ಚೆಯಾಗಲಿ, ತಮ್ಮದು ಆಮೇಲೆ ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕಾರ ಮಾಡಿ. ಅನಂತರ ತೆಗೆದುಕೊಳ್ಳುತ್ತೇನೆ ದಯಮಾಡಿ ಸಹಕರಿಸಿ. ಅಕೌಂಟೆಂಟ್ ಜನರಲ್ ಕಛೇರಿಯ ವಿಚಾರದ ಬಗ್ಗೆ ಸಭಾನಾಯಕರು ಉತ್ತರ ಹೇಳಿ.

## 6. ಮುಖ್ಯ ಮಂತ್ರಿಗಳವರಿಂದ ಹೇಳಿಕೆ

### ವಿಷಯ : ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳರ ನೇಮಕಾತಿ ಬಗ್ಗೆ

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಪತ್ರಿಕೆಯಲ್ಲಿ ಓದಿದ್ದೇನೆ. ತಮಿಳುನಾಡಿನ ಮುಖ್ಯಮಂತ್ರಿಗಳ ಬೇಡಿಕೆಯ ಪ್ರಕಾರ ಪ್ರಧಾನಮಂತ್ರಿಗಳು ತಮಿಳರನ್ನು ಅದೇ ಕಛೇರಿಯಲ್ಲಿ ಇಟ್ಟಿದ್ದಾರೆಂದು. ಅಧಿಕೃತವಾಗಿ ನಮಗೇನೂ ರೆಫರೆನ್ಸ್ ಅಕೌಂಟೆಂಟ್ ಜನರಲ್ ಆಫೀಸಿನಿಂದ ನಮ್ಮ ಮುಖ್ಯಕಾರ್ಯದರ್ಶಿಗಳಿಗೆ ಏನೂ ಇನ್‌ಫರ್ಮೇಷನ್ ಬಂದಿಲ್ಲ. ಕೇಂದ್ರ ಸರ್ಕಾರದ ಕಛೇರಿಯಲ್ಲಿ ಏನು ಹೇಳುತ್ತಾರೆ. ಕನ್ನಡ ಜ್ಞಾನ ಅವಶ್ಯಕತೆಯಿರತಕ್ಕ ಹುದ್ದೆಗಳು ಆದರೆ ತಮಿಳರನ್ನು ಅಕೌಂಟ್ಸ್ ಕನ್ನಡದಲ್ಲಿದ್ದು ಆತನಿಗೆ ಕನ್ನಡ ಭಾರದಿದ್ದರೆ ಆತನನ್ನು ಹೇಗೆ ಅಕೌಂಟ್ಸ್ ಆಫೀಸರ್ ಮಾಡುತ್ತಾರೆ? ತಮಿಳರು ಬೇರೆ ಕೆಲಸಗಳಲ್ಲಿ ರೈಲ್ವೆಯಲ್ಲಿದ್ದಾರೆ, ಪೋಸ್ಟ್ ಅಂಡ್ ಟೆಲಿಗ್ರಾಫ್‌ನಲ್ಲಿದ್ದಾರೆ ಇನ್ನು ಬೇರೆ ಬೇರೆ ಕಡೆಗಳಲ್ಲಿದ್ದಾರೆ. ಅಕೌಂಟೆಂಟ್ ಜನರಲ್ ಆಫೀಸ್‌ದು ನಿಲುವೇನು ಕನ್ನಡದ ನಾಲೆಡ್ಜ್ ಇರತಕ್ಕವರನ್ನು ನೇಮಕ ಮಾಡಬೇಕೆಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅವರನ್ನು ಎಲ್ಲಿ ಅಬ್ಸಾರ್ಬ್ ಮಾಡಿದ್ದಾರೆನ್ನುವ ಬಗ್ಗೆ ಅವರಿಂದ ಉತ್ತರ ಬಂದಮೇಲೆ ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ನಾಲ್ಕು ಜನ ತಮಿಳರ ನೇಮಕವಾಗಿದೆ. ಇದು ಸ್ಪಷ್ಟವಾದ ವಿಚಾರ. ಇಲ್ಲಿ ಪ್ರತಿಭಟನೆಯಾದಾಗ ಆದೇಶವನ್ನು ಹಿಂದಕ್ಕೆ ಪಡೆದಿದ್ದಾರೆ. ಮತ್ತೆ ಅವರನ್ನು ಅಲ್ಲಿಯೇ ಹಾಕಬೇಕೆಂದು ತಮಿಳುನಾಡಿನ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರ ಬರೆದ ಮೇಲೆ ಪುನ: ನೇಮಕ ಮಾಡಲಾಗಿದೆ. ಇದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ನಿಮ್ಮ ನಿಲುವೇನು ಎಂಬುದನ್ನು ಪ್ರಧಾನ

ಮಂತ್ರಿಗಳಿಗೆ ಹೇಳಬೇಕು. ತಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇದರ ಅವಶ್ಯಕತೆಯಿಲ್ಲ ತಮ್ಮ ನಿಲುವಿನಲ್ಲಿ ಬದಲಾವಣೆಯಾಗಬೇಕು, ಇಲ್ಲದಿದ್ದರೆ ಬಹಳ ಅಪಾಯವಿದೆಯೆಂದು ತಾವು ಹೇಳಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಸರ್ವೀಸ್ ಸೆಲೆಕ್ಷನ್ ಬೋರ್ಡ್‌ನಲ್ಲಿ ತಮಿಳರು ಇದ್ದಾರೆ. ಮಿನಿಸ್ಟರ್ ತಮಿಳರು. ಸಿ ಅಂಡ್ ಡಿ ಗ್ರೂಪ್ ಹುದ್ದೆಗಳಿಗೆ ಕನ್ನಡ ಬರಬೇಕೆಂದು ಕಡ್ಡಾಯವಿದೆ. ಕಾನೂನು ಪ್ರಕಾರ ಸೆಲೆಕ್ಟ್ ಮಾಡಿ ಕನ್ನಡಿಗರನ್ನು ಸೆಲೆಕ್ಟ್ ಮಾಡಿದರು ನಂತರ ಏನು ಮಾಡಿದರು ಅಂದರೆ ಅವರನ್ನು ದೆಹಲಿಗೆ ಹಾಕಿದರು. ಸಿ ಅಂಡ್ ಡಿ ಗ್ರೂಪ್‌ಗಳಿಗೆ ೩ ಸಾವಿರ ರೂಪಾಯಿ ಸಂಬಳ. ದೆಹಲಿಗೆ ಯಾರು ಹೋಗುತ್ತಾರೆ? ಕನ್ನಡಿಗರು ಸೆಲೆಕ್ಟ್ ಆದರೂ ಯಾರೂ ರಿಪೋರ್ಟ್ ಮಾಡಿಕೊಳ್ಳಲಿಲ್ಲ ಎಂದು ಪುನ: ತಮಿಳರನ್ನು ಸೆಲೆಕ್ಟ್ ಮಾಡಿ ಅವರನ್ನು ತೆಗೆದು ಇಲ್ಲಿಗೆ ಹಾಕಿದರು. ಇದು ಕಾನ್‌ಸ್ಪಿರೆಸಿ ನಮ್ಮ ಸರ್ಕಾರದಲ್ಲಿ ಮುಖ್ಯ ಕಾರ್ಯದರ್ಶಿಯವರಾಗಲಿ, ಉಳಿದ ಅಧಿಕಾರಿಗಳಾಗಲೀ ಅವರು ಎಚ್ಚರಿಕೆ ವಹಿಸಿ ನೋಡಬೇಕು. ಇದನ್ನು ನೀವು ಗಮನಿಸಬೇಕು. ಇದೆಲ್ಲ ಆಗುತ್ತಿದೆ. ತಮಿಳುನಾಡಿನ ಮಂತ್ರಿಗಳು ಸೆಲೆಕ್ಷನ್ ಬೋರ್ಡ್ ಛೇರ್ಮನ್ ಅವರೇ ಇದ್ದಾರೆ. ಕನ್ನಡಿಗರ ಅವಕಾಶವನ್ನೂ ತಪ್ಪಿಸುವುದಕ್ಕೆ ಈ ತರಹ ಮಾಡಕೂಡದು. ಕನ್ನಡಿಗರನ್ನು ಸಿ ಅಂಡ್ ಡಿ ಗ್ರೂಪ್ ಹುದ್ದೆಗಳಿಗೆ ಸೆಲೆಕ್ಟ್ ಮಾಡಿದರೆ ಕರ್ನಾಟಕಕ್ಕೆ ಹಾಕಬೇಕು. ಅವರನ್ನು ತೆಗೆದುಕೊಂಡು ಹೋಗಿ ದೆಹಲಿಗೆ ಹಾಕುವುದು ಅವರು ಬರಲಲ್ಲವೆಂದು ಹೇಳಿ ತಮಿಳರನ್ನು ಸೆಲೆಕ್ಟ್ ಮಾಡಿಕೊಳ್ಳುವುದು; ಇದು ಕಾನ್‌ಸ್ಪಿರೆಸಿ.

ಶ್ರೀ ವಾಟಾಳ್ ನಾಗರಾಜ್ : ಆಯ್ಕೆಯಾದದ್ದು ೧೯ ಜನ ತಮಿಳರು. ಅವರು ಕೇರಳದವರಲ್ಲ ಆಂಧ್ರದವರಲ್ಲ. ಅಂದರೆ ತಮಿಳರದ್ದು ಒಂದು ಪಿತೂರಿ ನಡೆಯುತ್ತಿದೆ. ಇದು ತಮ್ಮ ಗಮನದಲ್ಲಿರಬೇಕು.

ಶ್ರೀ ಜೆ. ಹೆಚ್. ಪಟೇಲ್ : ಅವರು ಏನೇ ಪಿತೂರಿ ಮಾಡಿದರೂ ನಮ್ಮ ಹಕ್ಕಿನ ರಕ್ಷಣೆ ನಮ್ಮ ಕೈಯಲ್ಲಿದೆ. ನಾವು ಪ್ರಧಾನ ಮಂತ್ರಿಗಳಿಗೆ ಹೇಳಬೇಕು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಬಹುದು. ಇವತ್ತು ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿ ಅಕೌಂಟೆಂಟ್ ಜನರಲ್ ಕಛೇರಿಯಿಂದ ಎಕ್ಸ್‌ಪ್ಲನೇಷನ್ ತರಿಸುತ್ತೇನೆ. ಮತ್ತೆ ಅವರು ಇದನ್ನೇ ರಿಪೀಟ್ ಮಾಡಿದರೆ ನಾವು ವಿರೋಧ ಮಾಡಬೇಕಾಗುತ್ತದೆ. ವಿರೋಧ ಮಾಡುವುದಕ್ಕೆ ಕನ್ನಡದ ರಕ್ಷಣೆ ಮಾಡುವುದಕ್ಕೆ ನಾನು ತಮ್ಮೊಡನೆ ಯಾವತ್ತೂ ಜೊತೆಗೆ ಇದ್ದೇನೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ತಾವು ತಮ್ಮ ಭಾಷಣ ಶುರು ಮಾಡಿ.

## 7. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ ತುಂಬಾ ಸಂತೋಷ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿ): ನಿನ್ನೆ ತಾವು ಭಾಷಣ ಶುರು ಮಾಡಿದಾಗಿನಿಂದ ಕೇಳುತ್ತಿದ್ದೇನೆ.